ತಲುಪಿದ್ದರು. ವಿವಿಧ ತರಕಾರಿಗಳ ರಾಶಿಯ ನಡುವೆ ಕೆಲವು ಕೊಳೆತದನ್ನು, ಅಂಗಡಿಯವ ಹೆಕ್ಕಿ ಬಿಸಾಡುತ್ತಿದ್ದ.

'ಈ ಅಂಗಡಿಯಾತ ಕೊಳೆತ ತರಕಾರಿಯನ್ನು ಯಾಕೆ ಬಿಸಾಡ್ತಿದ್ದಾನೆ ಗೊತ್ತ..?' ಅಪೂರ್ವ ಸೂರ್ಯನತ್ತ ತಿರುಗಿ ಪ್ರಶ್ನಿಸಿದಳು. ಅವನು ಮೌನವಾಗಿ ಅವಳ ಮಾತಿಗಾಗಿ ಕಾಯುತ್ತಿದ್ದ.

'ಒಂದು ಕೊಳೆತ ತರಕಾರಿ ಇದ್ರೆ, ಉಳಿದವನ್ನು ಅದು ಹಾಳು ಮಾಡುತ್ತೆ.. ಅಂತ.. ಯಾವುದು ನಮ್ಮ ಮನಸ್ಸನ್ನು ಕೊಳೆಯಲು ಬಿಡುತ್ತದೋ, ಅದನ್ನು ಮೊದಲು ಕಿತ್ತು ಬಿಸಾಡಬೇಕು.. ಆಗಲೇ ನಮ್ಮ ಮನಸ್ಸು ಸ್ವಸ್ಥವಾಗಿರಲು ಸಾಧ್ಯ..'

ತನ್ನ ಬಾಣ ಗುರಿ ಮುಟ್ಟಿದೆಯೋ, ಇಲ್ಲವೋ ಎಂದು ಅಪೂರ್ವ ಸೂರ್ಯನ ಮುಖವನ್ನೇ ಅವಲೋಕಿಸಿದಳು. ಅದು ಮಾತ್ರ ಗಂಭೀರವಾಗಿತ್ತು. ತರಕಾರಿಗಳನ್ನು ಖರೀದಿಸಿ ಹಿಂತಿರುವಾಗಲೂ ಸೂರ್ಯ ಮೌನಕ್ಕೆ ಶರಣಾಗಿದ್ದ. ಅವನೇನಾದರೂ ಹೇಳುತ್ತಾನೆಂದು ಕಾದಳು. ಅವನಿಂದ ಯಾವ ಪ್ರತಿಕ್ರಿಯೆ ಬಾರದಾಗ, 'ನಿಮ್ಗೆ.. ನನ್ನ ಮಾತುಗಳಿಂದ ಬೇಸರವಾಯ್ತಾ ಸೂರ್ಯ..?'

'ಇಲ್ಲ ಅಪೂರ್ವ.. ನಿಮ್ಮ ಕಾಳಜಿ ನನಗೆ ಅರ್ಥವಾಗುತ್ತೆ'

'ಮತ್ತೆ.. ಈ ಮೌನ, ಈ ಚಿಂತೆ ಯಾಕೆ? ಅಷ್ಟೊಂದು ಗಂಭೀರವಾಗಿ ಕಾಡುವ ಚಿಂತೆ ಏನು ನಿಮ್ಮದು? ಅದನ್ನು ವ್ಯಕ್ತಪಡಿಸಿದರೆ ಅದಕ್ಕೆ ಪರಿಹಾರ ಸಿಗಬಹುದು...' ಅದಕ್ಕೂ ಸೂರ್ಯನ ಮೌನವೇ ಉತ್ತರವಾಯಿತು.

'ನಿಮ್ಗೆ.. ನನ್ನ ಬಳಿ ಅದನ್ನು ಹಂಚಿಕೊಳ್ಳಲು ಸಾಧ್ಯವಿಲ್ಲದಿದ್ದರೆ.. ನಾನು ಒಬ್ಬ ಒಳ್ಳೇ ಕೌನ್ಸಿಲರನ್ನು ನೋಡ್ತೀನಿ. ಅವ್ರ ಬಳಿ ಮಾತನಾಡಿದ್ರೆ ನಿಮ್ಮ ಮನಸ್ಸು ಸರಿ ಹೋಗಬಹುದು.' ಅಪೂರ್ವ ನುಡಿದಾಗ ಸೂರ್ಯ ಅವಳತ್ತ ಕಣ್ಣು ಕೆಕ್ಕರಿಸಿ ನೋಡಿದ.

'ನನ್ಗೆ ಹುಚ್ಚು ಹಿಡಿದಿದೆ ಅಂತ ನೀನು ಭಾವಿಸಿದ್ಯಾ..?'

'ಇಲ್ಲ ಸೂರ್ಯ.. ನೀವು ಅಪಾರ್ಥ ಮಾಡ್ಕೊಂಡಿದ್ದೀರಾ.. ಕೌನ್ಸಿಲರ್ ಅಂದ್ರೆ.. ಆಪ್ತ ಸಮಾಲೋಚನೆ ಅಷ್ಟೇ.. ಅವ್ರು ನಿಮ್ಗೆ ಯಾವ ಮದ್ದೂ ಕೊಡೋದಿಲ್ಲ.. ನಿಮ್ಮ ಸಮಸ್ಯೆ ಆಲಿಸಿ ಮಾತಿನ ಪರಿಹಾರ ಕೊಡ್ತಾರೆ.. ಅಷ್ಟೇ! ನೀವು ಹೇಳ್ತಿರೋದು ಬೇರೆ.. ಸೈಕಿಯಾಟ್ರಿಸ್ಟ್.. ಅಲ್ಲಿಗೆ ನಾನು ಕರ್ಕೊಂಡು ಹೋಗ್ತಾ ಇಲ್ಲ..!'

ಅವನು ಅದಕ್ಕೆ ಉತ್ತರಿಸುವ ಮುನ್ನವೇ, 'ನಾನು ನಿಮ್ಮ ಸ್ನೇಹಿತೆ, ನಿಮ್ಮ ಹಿತಚಿಂತಕಿ ಅಂತ ನೀವು ಪರಿಗಣಿಸೋದೇ ಆದ್ರೆ.. ನೀವು ನನ್ನೊತೆ.. ಕೌನ್ಸಿಲರ್ ಬಳಿ ಬರಲೇ ಬೇಕು.. ನೀವು ನಿಮ್ಮ ಮನಸ್ಥಿತಿ ಬದಲಿಸಿಕೊಂಡು ಎಲ್ಲರಂತೆ ಚೆನ್ನಾಗಿ ಬಾಳಬೇಕು ಅನ್ನುವ ಕಳಕಳಿಗೆ ನಾನು ಈ ಮಾತು ಹೇಳ್ತಿದ್ದೀನಿ.. ಇದ್ರಿಂದ ಒಳಿತಾಗೋದು ನಿಮಗೇ.. ನಿಮ್ಮ ಈ ವರ್ತನೆಯಿಂದ ನಿಮ್ಮ ತಾಯಿ ಎಷ್ಟು ನೊಂದ್ಕೊಂಡಿದ್ದಾರೆ, ನಿಮ್ತಂದೆ ಎಷ್ಟು ಚಿಂತಿತರಾಗಿದ್ದಾರೆ ಅಂತ ನಿಮಗೊತ್ತ? ನಿಮ್ಮ ಈ ಮನಸ್ಥಿತಿಗೆ ಯಾರು ಕಾರಣರಾದರೋ, ಅವ್ರಿಗೆ ನೀವು ಉತ್ತರ ಕೊಡಬೇಕಾದರೆ.. ನೀವು ಬದಲಾಗಬೇಕು.. ಒಂದ್ಸಲ ನನ್ನೊತೆ ಬನ್ನಿ.. ನಿಮ್ಗೆ ಸರಿ ಹೋದ್ರೆ ಮುಂದುವರಿಯೋಣ.. ಇಲ್ದಿದ್ರೆ ಬೇಡ.. ಆಯ್ಕೆ ನಿಮ್ಮದು..!' ಎಂದು ಆಗ್ರಹಿಸಿದಳು ಅಪೂರ್ವ.

ಅವಳ ಸ್ನೇಹಕ್ಕೆ ಸೂರ್ಯ ಕಡೆಗೂ ಸೋತು ತಲೆದೂಗಿದ.

'ನೀನು ಮಾತಿನಲ್ಲೇ ನನ್ನನ್ನು ಸೋಲಿಸಿ ಬಿಡ್ತೀಯ.. ಮರಳು ಮಾಡ್ತೀಯಾ.. ನೋಡಿದಂತೆ ಅಲ್ಲ.. ನೀನು..' ಎಂದಾಗ ಅವಳು ಜೋರಾಗಿ ನಕ್ಕಳು. ಸೂರ್ಯ ಅವಳ ಕೆಂಪೇರಿದ್ದ ನಗುಮುಖದಿಂದ ಕಣ್ತೆಗೆಯದಾದ.

* * *

ಆದರ್ಶ, ಕೌನ್ಸಲರ್‌ನ ಬಳಿ, ಸೂರ್ಯನಿಗಾಗಿ ಸಂದರ್ಶನದ ಸಮಯವನ್ನು ನಿಗದಿಪಡಿಸಿದ ದಿನ ಮತ್ತು ಆ ವೇಳೆಯನ್ನು ಅಪೂರ್ವಳಿಗೆ ಮೆಸೇಜ್ ಮಾಡಿದ್ದ. ಆದರೆ ಕೌನ್ಸಿಲರ್‌ನ ಬಳಿ ಸೂರ್ಯನನ್ನು ಕರೆದೊಯ್ಯುವ ಮುನ್ನ ರಾಯರ ಮತ್ತು ವಿಜಯಮ್ಮನವರ ಅನುಮತಿ ಪಡೆಯಬೇಕೆಂದೂ, ತಾನೇ ಸ್ವಾತಂತ್ರ್ಯವಹಿಸಿ ಮಾಡುವುದು ಉಚಿತವಲ್ಲ ಎನಿಸಿತ್ತು. ಸೂರ್ಯನಿಗಿಂತಲೂ ರಾಯರ ಮತ್ತು ವಿಜಯಮ್ಮ ಬೇಗನೇ ಏಳುತ್ತಿದ್ದರಿಂದ ಆ ದಿನ ಅವರಿಬ್ಬರನ್ನು ಕುಳ್ಳಿರಿಸಿ ತನ್ನ ನಿಲುವನ್ನು ಅವರ ಮುಂದಿಟ್ಟಾಗ ರಾಯರು ಪ್ರಸನ್ನರಾದರು. ವಿಜಯಮ್ಮನಿಗೆ, ಅಪೂರ್ವ ಹಾಗೇಕೆ ನಡೆದುಕೊಳ್ಳುತ್ತಿದ್ದಾಳೆಂದು ಸರಿಯಾಗಿ ಅರ್ಥವಾಗದಾಗ ರಾಯರೇ ಪತ್ನಿಗೆ ವಿವರಿಸಿ ಅವರ ಅನುಮಾನವನ್ನು ಬಗೆ ಹರಿಸಿದರು.

'ನೀನು ಮಾಡ್ತಿರೋದು ಸರಿಯಾಗೇ ಇದೆ ಅಪೂರ್ವ.. ನಾವು ಹೆತ್ತವರಾಗಿ ಮಾಡಬೇಕಾಗಿರುವ ಕಾರ್ಯವನ್ನು ಅವನ ಹಿತೈಷಿಯಾಗಿ ನೀನು ಮಾಡ್ತಾ ಇದ್ದೀಯ.. ಅವನ ಬಗ್ಗೆ ಇಷ್ಟೊಂದು ಪ್ರೀತಿ, ಕಳಕಳಿ ತೋರಿಸುತ್ತಿರುವುದು ನಿನ್ಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು.. ಅವನು ಸರಿ ಹೋದರೆ, ಹೆತ್ತವರಾದ ನಮಗೆ ಅದಕ್ಕಿಂತ ಮುಖ್ಯ ಏನಿದೆ ಹೇಳು..? ನಮ್ಮ ಮಗ ನಮ್ಮ ಕೈಗೆ ಬಂದ್ರೆ ಸಾಕು..!'

ವಿಜಯಮ್ಮ ಅಳುಕು ಪ್ರದರ್ಶಿಸುತ್ತ,'ಕೌನ್ಸಿಲಿಂಗ್‌ನಿಂದ ವ್ಯತಿರಿಕ್ತ ಪರಿಣಾಮ ಆಗೋದಿಲ್ಲ ತಾನೇ?'

'ಪ್ರಪಂಚದಲ್ಲಿನ ಹೆಚ್ಚಿನ ಸಮಸ್ಯೆಗಳಾಗೋದೇ..ಸಮರ್ಪಕವಾದ ಸಂಹವನದಲ್ಲಿ ಕುಂದುಂಟಾದಾಗ.. ಹೇಳಬೇಕಾದ ಮಾತುಗಳು ಮನದಲ್ಲೇ ಉಳಿದಾಗಲೇ ಸಮಸ್ಯೆಗಳು ಉದ್ಭವವಾಗೋದು.. ಬೀಗ ಹಾಕಿದ ಮನಸ್ಸಿನಲ್ಲಿ ಮಾತಿಗೆ ಜಾಗವೆಲ್ಲಿದೆ? ನಮ್ಮ ಸೂರ್ಯನು ಹೀಗಾಗಲೂ ಒಂದು ವಿಧದಲ್ಲಿ ನಾನೇ ಕಾರಣ.. ಅವ್ನ ಮೇಲಿನ ಪ್ರೀತಿಯನ್ನು ನಾನು ಹಠ, ಆಗ್ರಹ, ಅಂಕುಶದಿಂದ ಹಾಕಲು ಯತ್ನಿಸಿ ಅವ್ನು ಒರಟಾದ.. ಅಪರಾಧಿಯಾದ, ಅದಕ್ಕೆ ನನ್ನನ್ನು ನಾನು ಎಂದಿಗೂ ಕ್ಷಮಿಸಲಾರೆ..' ರಾಯರ ದನಿ ಭಾರವಾಯಿತು.

ಹಳೆಯ ನೆನಪುಗಳು ಮುತ್ತಿಕೊಂಡು ಅವರ ಮನಸ್ಸು ನೋವಿನ ಮಡುವಿನಲ್ಲಿ ನರಳಾಡಿತು.

'ಈಗ ಹಳೇ ಮಾತ್ಯಾಕೆ ಬಿಡಿ.. ಆಗಿದ್ದು ಆಗಿ ಹೋಯಿತು.. ಮುಂದೆ ಆಗುವುದರ ಬಗ್ಗೆ ಯೋಚಿಸೋಣ..! ರಾಯರು ಒಳ ಹೋಗಿ ಒಂದಷ್ಟು ಹಣವನ್ನು ಅಪೂರ್ವಳ ಕೈಗಿತ್ತರು.

'ಆಸ್ಪತ್ರೆ, ಓಡಾಟ ಅಂತ ನಿನ್ಗೆ ದುಡ್ಡಿನ ಅಗತ್ಯ ಬೀಳಬಹುದು.. ಇದು ನಿನ್ನ ಬಳಿ ಇರಲಿ..!' ಅದರ ಅಗತ್ಯವೂ ಇದ್ದರಿಂದ ಅಪೂರ್ವ ಮರು ಮಾತನಾಡದೆ ಅದನ್ನು ಸ್ವೀಕರಿಸಿದಳು.

ಸೂರ್ಯ ಮತ್ತು ಅಪೂರ್ವ ನಿಗದಿತ ಸಮಯಕ್ಕೆ ಹೊರಟು, ಆದರ್ಶ ತಿಳಿಸಿದ ವೈದ್ಯರ ಕ್ಲಿನಿಕ್‌ಗೆ ಬಂದಾಗ ಆದರ್ಶ ಅವರ ಹಾದಿಯನ್ನೇ ಕಾಯುತ್ತಿದ್ದ. ಆದರ್ಶನನ್ನು ಅಲ್ಲಿ ನಿರೀಕ್ಷಿಸಿರದ ಸೂರ್ಯನಿಗೆ ಇರುಸುಮುರುಸಾಗಿತ್ತು. ತನ್ನ ಹಿಂದೆ ಅಪೂರ್ವ ಮತ್ತು ಆದರ್ಶ ಮಾತನಾಡಿಕೊಂಡೇ ಈ ಪ್ರಯತ್ನಕ್ಕೆ ಇಳಿದಿದ್ದಾರೆ ಎಂಬುವುದು ಅವನಿಗೆ ಮನದಟ್ಟಾಯಿತು. ಅವನ ಮನೋಭಾವನೆಯನ್ನು ಅರ್ಥ ಮಾಡಿಕೊಂಡಂತೆ ಅಪೂರ್ವ ನುಡಿದಳು. 'ಡಾ.ಮುರಳಿಯವರ ಬಗ್ಗೆ ಆದರ್ಶ ತಿಳಿಸಿದ್ದು. ಬಹಳ ನುರಿತ ವೈದ್ಯರಂತೆ..!' ಎಂದು ಒತ್ತಿ ನುಡಿದಾಗ ತನಗೆ ಆ ವೈದ್ಯರಿಂದ ಆಗುವ ಉಪಯೋಗಕ್ಕಿಂತಲೂ, ಅಪೂರ್ವ ಮತ್ತು ಆದರ್ಶರ ನಿಕಟತೆ, ಸೂರ್ಯನನ್ನು ವಿಚಲಿತನನ್ನಾಗಿಸಿತ್ತು.

(ಸಶೇಷ)

## ನಿವೇದನೆ

ಮುತ್ತು ರತ್ನಗಳನ್ನೇ
ಮಿಗಿಲೆಂದು
ತಿಳಿದಿದ್ದೆ
ಸಮುದ್ರ ರಾಜನೇ
ಮನ್ನಿಸು ನನ್ನ ತಪ್ಪನ್ನು
ಕರುಣಿಸು ಹಿಡಿ ಉಪ್ಪನ್ನು..

★ ಅರವಿಂದ ದೀಕ್ಷಿತ್

